<u>ಎಸ್ ಸಿ ನಂ. 5024/2022</u>

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ:** 5

**ಪಿ ಡಬ್ಲೂ:** 4

ಸಾಕ್ಷಿಯ ಹೆಸರು - ಪಂಪಣ್ಣ
ತಂದೆಯ ಹೆಸರು - ಮೂಗಪ್ಪ
ವಯಸ್ಸು - 60 ವರ್ಷ
ಉದ್ಯೋಗ - ರೈತ
ವಾಸಸ್ಥಳ - ವಟ್ಟಮ್ಮನ ಹಳ್ಳಿ ಗ್ರಾಮ

**<u>ಸಾಕ್ಷಿಯನ್ನು ದಿನಾಂಕ: 29-05-2026 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಮಾನ್ಯ ಪಿ. ಪಿ. ಅವರಿಂದ</u>**

ಆರೋಪಿತರು ನನಗೆ ಗೊತ್ತು. ಚಾಸಾ -1 ಮತ್ತು 2 ರವರು ಗೊತ್ತು. ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು: ಮಾನ್ಯ ಪಿ ಪಿ ಅವರಿಂದ</u>**

ದಿ: 24-08-2020 ರಂದು ಬೆಳಿಗ್ಗೆ 09.30 ಕ್ಕೆ ಆಸ್ತಿಯನ್ನು ಅಳತೆ ಮಾಡುವ ವಿಚಾರವಾಗಿ ಆರೋಪಿತರು ನಮ್ಮೊಂದಿಗೆ ಜಗಳ ತೆಗೆದು, ಬಟ್ಟೆ ಹರಿದು, ಚಾಸಾ-1 ಮತ್ತು 2 ರವರಿಗೆ ಬಡಿಗೆ, ಮೋಟಾರ್ ಸೈಕಲ್ ಚಾವಿಯಿಂದ ಹಲ್ಲೆ ಮಾಡಿ, ಕೊಲೆ ಪ್ರಯತ್ನ ಮಾಡಿದ್ದನ್ನು ಕಣ್ಣಾರೆ ಕಂಡು ಈ ಬಗ್ಗೆ ಪೋಲಿಸರ ಮುಂದೆ ನಾನು.............. ನೀಡಿರುತ್ತೇನೆ ಎಂದು ನಿಪಿ: 7 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಸಿ ಪಿ., ವಕೀಲರಿಂದಃ ಇಲ್ಲಾ.**

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.